ಮರಿಸದಸ್ಯನನ್ನೂ ಹೊತ್ತುಕೊಂಡು ಹೊಳೆಯ ದಡದಲ್ಲಿದ್ದ ಆ ದೇವಸ್ಥಾನದೊಳಕ್ಕೆ ಹೋದೆವು. ಅಲ್ಲಿಯ ಒಂದು ಮೂಲೆಯಲ್ಲಿ ಹರಕೆಗೆ ಸಲ್ಲಿಸಿದ್ದ ಕೋಳಿಯ ತುಪ್ಪಳ ರಾಶಿರಾಶಿಯಾಗಿ ಬಿದ್ದಿದ್ದು ನನಗೆ ಕಾಣಿಸಿದೊಡನೆ, ನಮ್ಮೂರು ಜನಿವಾರದ ಜಾತ್ರೆಯ ಸಂದರ್ಭದಲ್ಲಿ ಬಲಿ ಕೊಡುತ್ತಿದ್ದ ಆಡಿನ ಮುಖ, ಅದರ ಕಣ್ಣುಗಳ ಅಸಹಾಯಕತೆ, ದನಿಯಲ್ಲಿನ ಆತಂಕ, ಕಾಲುಗಳ ಚಡಪಡಿಕೆಯೆಲ್ಲ ಸುಳಿದು ಹೋದವು. ಮಚ್ಚಿನ ಒಂದೇ ಒಂದು ಏಟಿಗೆ ಎರಡು ಭಾಗವಾಗಿ ಒದರುತ್ತ, ರಕ್ತ ಚಿಲ್ಲೆಂದು ದೇಹ ಸ್ತಬ್ಧವಾಗುತ್ತಿದ್ದ ಆಡಿನ ಚಿತ್ರ ನನ್ನ ಕಣ್ಮುಂದೆ ಬಂದು ಕೈಕಾಲುಗಳು ತಣ್ಣಗಾದವು. ಬುಟ್ಟಿಯ ತೂತಿನಿಂದ ಪುಟ್ಟ ನಾಯಿಮರಿಯ ಕಣ್ಣು ನಕ್ಷತ್ರದಂತೆ ಹೊಳೆಯುತ್ತ ನನ್ನನ್ನೇ ನೋಡುತ್ತಿತ್ತು.

ಮನೆಗೆ ಕಾಲಿಟ್ಟ ಈ ಹೊಸ ಸದಸ್ಯನಿಗೆ ಏನಂತ ಹೆಸರಿಡುವುದು ಎಂದು ಚರ್ಚೆ ಮಾಡಿದಾಗ, ಎಲ್ಲರೂ ಒಂದೊಂದು ಹೆಸರನ್ನು ಸೂಚಿಸಿದರು. ನಾವೆಲ್ಲ ಸೂಚಿಸಿದ ಟೈಮ್ ಓಲ್ಡ್ 'ಗುಂಡ', 'ಟಾಮಿ', 'ಕೆಂಚ', 'ಬಿಳಿಯ', 'ಟೈಗರ್' ಇತ್ಯಾದಿ ಇತ್ಯಾದಿ ಹೆಸರುಗಳೆಲ್ಲ ತಾವೇತಾವಾಗಿ ಪಕ್ಕಕ್ಕೆ ಸರಿದು ನಿಲ್ಲುವಂತೆ ಅಣ್ಣ 'ಚರ್ಚಿಲ್' ಎಂದು ಸೂಚಿಸಿದರು. ನಮಗೆ ಆ ಹೊತ್ತಲ್ಲಿ ಅವರು ಸೂಚಿಸಿದ ಹೆಸರಿನ ಹಿಂದಿನ ಚರಿತ್ರೆಯಾಗಲೀ, ಅದನ್ನು ಸೂಚಿಸಲು ಅವರ ಮನಸ್ಸಿನಲ್ಲಿದ್ದ ವಿಚಾರಗಳಾಗಲೀ ಯಾವುದೂ ಗೊತ್ತಿರಲಿಲ್ಲ. ಆಮೇಲೆ ಕೆಲವು ತಿಂಗಳ ನಂತರ, ಇದರ ಬಗ್ಗೆ ನಾನು ಕೇಳಿದಾಗಲೂ ಅವರು 'ಯಾಕೋ ಗೊತ್ತಿಲ್ಲ ಆ ಹೆಸರು ಮನಸ್ಸಿಗೆ ಬಂತು' ಎಂದರು, ಅಕಾರಣ ಮನಸ್ಸಿನೊಳಗೆ ಜೀವತಳೆವ ಕವಿತೆಯಂತೆ ಆ ಹೆಸರು ಅವರಲ್ಲಿ ಮೂಡಿಬಂದಿತ್ತೇನೋ... ಆ ಉತ್ತರವು ನನ್ನೊಳಗೆ ಕವಿತೆಯ ಬೀಜಗಳನ್ನು ತನಗೂ ಗೊತ್ತಿಲ್ಲದೆಯೇ ಬಿತ್ತಿರಬಹುದು ಅನ್ನಿಸುತ್ತಿದೆ. 'ಚರ್ಚಿಲ್' ಎಂಬುದು ನಾನು ಓದುತ್ತಿದ್ದ ಕ್ರೈಸ್ತ ಶಾಲೆಯ 'ಚರ್ಚ್'ಗೆ ಸಂಬಂಧಪಟ್ಟ ಏನೋ ಒಂದು ಹೆಸರಾಗಿಯೂ ಆ ಹೊತ್ತು ನನಗೆ ಆಪ್ತವಾಯಿತು.

'ಚರ್ಚಿಲ್' ಮನೆಯ ಸದಸ್ಯನಾದ ಮೇಲೆ ದಿನವೂ ಅವನನ್ನು ನಮ್ಮೂರಿನ ಸರ್ಕಾರಿ ಕಾಲೇಜಿನ ಆವರಣಕ್ಕೆ ಸುತ್ತಾಡಿಸಲು ಕರೆದುಕೊಂಡು ಹೋಗುವುದು ರೂಢಿಯಾಯಿತು. ಕಾಲೇಜು ಬಯಲಿಗೆ ಬರುವವರೆಗೂ ಸರಪಳಿಯ ಬಂಧನದಲ್ಲಿರುತ್ತಿದ್ದ ಅವನು ಖಾಲಿ ಬಯಲಲ್ಲಿ ಬಿಡುಗಡೆಗೊಳ್ಳುತ್ತಿದ್ದ. 'ಸೂರ್ಯಾಸ್ತ ಮುಗಿದೋಗುತ್ತೆ ಬೇಗ ಬೇಗ ನಡೀರಿ' ಎಂದು ತಾಕೀತು ಮಾಡುತ್ತ ನಡೆಯುತ್ತಿದ್ದ ಅಣ್ಣನನ್ನು ನಾನು, ನನ್ನ ತಮ್ಮ ಮತ್ತು ಚರ್ಚಿಲ್ ಅಕ್ಷರಶಃ ಓಡುತ್ತ, ಏದುಸಿರು ಬಿಡುತ್ತ, ಅಣ್ಣನಿಗೂ ಆ ಸೂರ್ಯನಿಗೂ ಆಗುವಷ್ಟು ಶಪಿಸುತ್ತ ಓಡುತ್ತಿದ್ದೆವು. ಸ್ಟೇಡಿಯಂ ಹತ್ತಿರ ಸಣ್ಣ ದಿಬ್ಬದಂತಹ ಜಾಗ ಇತ್ತು. ನಾವು ಓಡುತ್ತ ಹೋಗಿ ಆ ದಿಬ್ಬ ಹತ್ತಿ ಸೂರ್ಯನ ಕಡೆ ಮುಖಮಾಡಿ ಅರೆಗಣ್ಣಲ್ಲಿ ಮೌನವಾಗಿ ಧ್ಯಾನಕ್ಕೆ ಕೂರಬೇಕಿತ್ತು. ಅದಾಗಲೆ ಕಣ್ಮುಚ್ಚಿ ಕುಳಿತು 'ಓಂ'ಕಾರ ಹೇಳಿಕೊಳ್ಳುತ್ತಿದ್ದ ಅಣ್ಣನನ್ನು ನಾನು ಮತ್ತು ತಮ್ಮ ಓರೆಗಣ್ಣುಗಳಿಂದ ಅಣಕ ಮಾಡುತ್ತ, ಸೂರ್ಯ ಮುಳುಗುವುದನ್ನೇ ಕಾಯುತ್ತ ಒಂದೊಂದು ಕ್ಷಣವನ್ನೂ ಕಳೆಯುತ್ತಿದ್ದರೆ, ಚರ್ಚಿಲ್ ಏದುಸಿರು ಬಿಡುತ್ತ 'ಹ. ಹ.. ಹ...' ಎಂದು ನಾಲಿಗೆ ಹಿರಿದು ನಮ್ಮನ್ನೇ ನೋಡುತ್ತಿದ್ದ. ಸೂರ್ಯನನ್ನು ಬಿಟ್ಟು ಬೇರೆ ದಿಕ್ಕಿಗೆ ಮುಖ ಮಾಡಿದ್ದರೆ ಅಣ್ಣ ಅವನಿಗೆ 'ಎಲ್ಲಿ ನೋಡ್ತಿದಿಯೋ ದಡ್ಡ... ಅಲ್ಲಿ ಸೂರ್ಯಾಸ್ತ ನೋಡು' ಎಂದು ಪಶ್ಚಿಮಕ್ಕೆ ಕೈಮಾಡಿ ತೋರಿಸುತ್ತಿದ್ದರು. ಆಯಾಸದ ಪರಮಾವಧಿಯಲ್ಲಿರುತ್ತಿದ್ದ ಅವನ ನಾಲಗೆ ಮೇಲೆ ಸೂರ್ಯನ ಕಿರಣಗಳು ಬಿದ್ದು, ಸುರಿಯುತ್ತಿದ್ದ ಜೊಲ್ಲಿನ ಒಂದೊಂದು ಹನಿಯಲ್ಲೂ ಒಬ್ಬೊಬ್ಬ ಸೂರ್ಯರು ಮಿನುಗಿ ನೆಲಕ್ಕುರುಳುತ್ತಿರುವಂತೆ ನನಗೆ ಭಾಸವಾಗುತ್ತಿತ್ತು.

ಹೀಗೆಯೇ ಒಂದು ದಿನ ಸೂರ್ಯಾಸ್ತ ಮುಗಿದು ಮನೆಕಡೆಗೆ ನಡೆದಿರುವಾಗ... ಎಂದಿನಂತೆ